ಅವನ ಅಪಕ್ವ ಮನಸ್ಸು ಈ ಅಮೂರ್ತ ಕಲ್ಪನೆಯನ್ನು ಗ್ರಹಿಸ ಲಾರದು. ಮನಸ್ಸು ಪಕ್ವವಾಗುವುದು ಎಂದರೆ ಅಥವಾ ಮನಸ್ಸು ಬೆಳೆಯುವುದು ಎಂದರೆ, ಅದು ನಿಧಾನವಾಗಿ ಈ ಮೂರ್ತ ಕಲ್ಪನೆಯಿಂದ ಅಮೂರ್ತ ಕಲ್ಪನೆಯ ಕಡೆಗೆ ಬೆಳೆಯುವುದು. ಇದಕ್ಕೆ ಭಕ್ತಿ ಅಡಚಣೆಯಲ್ಲ, ಪೂರಕವಾಗಿದೆ. ಈ ಅಂಶವನ್ನು ಸ್ವಾಮೀಜಿ ವಿಶದಪಡಿಸುತ್ತಾರೆ.

ಎಲ್ಲಿಯವರೆಗೆ ಭಕ್ತಿಯು ವ್ಯಾಪಾರವಾಗುವುದೋ ಅಲ್ಲಿಯವರೆಗೆ ಭಕ್ತಿಯ ಮುಖ್ಯ ತಿರುಳಾದ ಪ್ರೀತಿ ಎಂಬುದು ಸಾಧ್ಯವಾಗುವುದೇ ಇಲ್ಲ. ಇದೊಂದು ಅಂಗಡಿ ವ್ಯಾಪಾರ ವಾಗುತ್ತದೆ. ಆದರೆ ಭಕ್ತನಾದವನು ಈ ಸ್ಥಿತಿಯಿಂದ ಮುಂದುವರೆದು ಮೇಲೇರಿದಾಗ, ಅವನಿಗೆ ಪ್ರೀತಿಯೊಂದೇ ಫಲವಾಗಿ ಕಾಣುವುದು. ಭಕ್ತಿ ಮತ್ತು ಜ್ಞಾನಗಳ ನಡುವೆ ಒಂದು ಮಹತ್ವವಾದ ವ್ಯತ್ಯಾಸವಿದೆ. ಭಕ್ತಿಯಲ್ಲಿ ಭಗವಂತನ ಮೇಲಿಡುವ ಪ್ರೀತಿಯೇ ದಾರಿ ಹಾಗೂ ಗುರಿ. ಇಲ್ಲಿ ಭಕ್ತಿಯಿಂದ ಪಡೆಯಬೇಕಾದ ಮತ್ತಾವ ವಸ್ತುವೂ ಇಲ್ಲ. ಭಕ್ತನಾದವನು ಜ್ಞಾನವನ್ನು ಗುರಿಯಾಗಿಟ್ಟುಕೊಂಡು, ಭಗವಂತನನ್ನು ಪ್ರೀತಿಸು ವುದಿಲ್ಲ. ಆದರೂ ಈ ಪ್ರಕ್ರಿಯೆಯಲ್ಲಿ ಅವನಿಗೆ ಜ್ಞಾನ ಪ್ರಾಪ್ತವಾಗುತ್ತದೆ.

ಜ್ಞಾನಮಾರ್ಗದಲ್ಲಿ ಸಹ ಭಕ್ತಿಯ ಲಕ್ಷಣಗಳು ಕಾಣುತ್ತವೆ. ನಿರಾಕಾರ ಪ್ರತಿಪಾದಕರಾದ ಅನೇಕ ಜ್ಞಾನಿಗಳು ಭಕ್ತಿಯ ಲಕ್ಷಣವನ್ನು ತೋರಿಸುತ್ತಾರೆ. ಆದರೆ ಇವರ ಚರಮಗುರಿ ಜ್ಞಾನ; ಭಕ್ತಿ ಇವರಿಗೆ ಮಾರ್ಗ ಮಾತ್ರ. ಈ ಕಾರಣದಿಂದ ಸ್ವಾಮಿ ವಿವೇಕಾನಂದರು ಭಕ್ತಿಯೇ ಶ್ರೇಷ್ಠ ಎಂದು ಹೇಳುತ್ತಾರೆ. ಏಕೆಂದರೆ, ಪರಿಪೂರ್ಣ ಭಕ್ತಿಯಲ್ಲಿ ಭಕ್ತ ಬಯಸದೇ ಇದ್ದರೂ, ಪರಿಪೂರ್ಣ ಜ್ಞಾನ ತಾನಾಗಿಯೇ ಲಭಿಸುತ್ತದೆ.

ಸ್ವಾಮೀಜಿಯವರು ನಾಮದ ಪೂಜೆಯ ಬಗ್ಗೆ ವಿವರಿಸುತ್ತಾರೆ. ಕ್ರೈಸ್ತರ ಹಳೆ ಒಡಂಬಡಿಕೆಯಲ್ಲಿ ದೇವರ ಹೆಸರನ್ನೇ ಪೂಜಿಸುವ ವಾಡಿಕೆಯಿದೆ. ಭಗವಂತನ ನಾಮವು ಬಹಳ ಪವಿತ್ರವೆಂದು ಪರಿಗಣಿಸಲಾಗುತ್ತದೆ. ಬೈಬಲ್‌ನಲ್ಲೂ ದೇವರ ನಾಮ ಬಹಳ ಪವಿತ್ರವಾದುದೆಂದು ಹೇಳಿದೆ. ಇದು ಸ್ವಾಮಿ ವಿವೇಕಾನಂದರ ಪ್ರಕಾರ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದ ವಿಷಯ. ನಾಮವನ್ನು ಭಾವಿಸದೇ ಅದಕ್ಕೆ ಸಂಬಂಧಪಟ್ಟ ಆಕಾರವನ್ನು ಭಾವಿಸಲು ಸಾಧ್ಯವೇ ಇಲ್ಲ. ನಾಮ ಮತ್ತು ಆಕಾರಗಳು ಒಂದಕ್ಕೊಂದು ಅನ್ಯೋನ್ಯವಾಗಿ ಬೆಸೆದುಕೊಂಡಿವೆ. ಹಾಗಾಗಿ ಕಣ್ಣಿಗೆ ಕಾಣುವ ಈ ಇಡೀ ಪ್ರಪಂಚವೇ ಭಗವಂತನ ರೂಪ ಮತ್ತು ನಾಮಗಳ ಪ್ರತೀಕವಾಗಿದೆ. ಹಾಗಾಗಿ ನಾಮ ಮತ್ತು ರೂಪಗಳನ್ನು ಪ್ರತ್ಯೇಕಿಸುವುದು ಅಸಾಧ್ಯ. ಪ್ರಪಂಚದಾದ್ಯಂತ ನಾಮರೂಪಗಳನ್ನು ಜನರು ಸಹಜವಾಗಿ ಪೂಜಿಸುವುದು ನಮಗೆ ಕಾಣುತ್ತದೆ. ಜೈನ ಮತ್ತು ಬೌದ್ಧಧರ್ಮೀಯರೂ ಸಹ ತಮ್ಮ ಧರ್ಮದ ಸಂಸ್ಥಾಪಕರನ್ನು ಆರಾಧಿಸುತ್ತಾರೆ, ಪೂಜಿಸುತ್ತಾರೆ. ಹಾಗಾಗಿ ಒಂದಲ್ಲ ಒಂದು ನಾಮರೂಪ ಮನುಷ್ಯನ ಭಕ್ತಿಭಾವನೆಗೆ ಬುನಾದಿಯಾಗಿ ನಿಲ್ಲುತ್ತದೆ. ಆದರೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಚರ್ಚಿನಲ್ಲಿ ಹುಟ್ಟಿದರೂ ಅಲ್ಲಿಯೇ ಸಾಯುವುದು ಒಳ್ಳೆಯದಲ್ಲ, ಮನುಷ್ಯ ಅದರಿಂದಾಚೆಗೂ ಬೆಳೆಯಬೇಕು, ಎಂದರೆ ಮೂರ್ತದಿಂದ ಅಮೂರ್ತದೆಡೆಗೆ ಬೆಳೆಯಬೇಕು" ಎಂದು.

ಬಹುಸಂಖ್ಯಾತರು ನಿರೀಶ್ವರವಾದಿಗಳು. ನಿರೀಶ್ವರ ವಾದಿಗಳ ಪ್ರಾಮಾಣಿಕತೆಯನ್ನು ಮೆಚ್ಚುತ್ತಾ ಸ್ವಾಮೀಜಿ ಹೇಳುತ್ತಾರೆ, ಈ ವಸ್ತುಪ್ರಧಾನವಾದ ನಿರೀಶ್ವರವಾದಿ ನಾಸ್ತಿಕರು ಧರ್ಮದ ಪ್ರತಿಪಾದಕರಾದ ಆಸ್ತಿಕರಿಗಿಂತ ಎಷ್ಟೋ ವಾಸಿ. ಆಸ್ತಿಕರು ಧರ್ಮಕ್ಕಾಗಿ ಯುದ್ಧ ಮಾಡುತ್ತಾರೆ, ಧರ್ಮಕ್ಕಾಗಿ ರಕ್ತಪಾತ ನಡೆಸುತ್ತಾರೆ, ವಾಗ್ವಾದ ಮಾಡುತ್ತಾರೆ, ಪಾಂಡಿತ್ಯವನ್ನು ಮೆರೆಯುತ್ತಾರೆ. ಆದರೆ ಧರ್ಮವನ್ನು ಸಾಕ್ಷಾತ್ಕಾರ ಮಾಡಿ ಕೊಳ್ಳಲಾರರು. ಏಕೆಂದರೆ ಅವರ ಗಮನವೆಲ್ಲಾ ಇತರರನ್ನು ಗೆಲ್ಲುವುದರ ಕಡೆಗೇ ಇರುತ್ತದೆಯೇ ಹೊರತು, ತಮ್ಮನ್ನು ತಾವು ವಿಮರ್ಶೆ ಮಾಡಿಕೊಳ್ಳುವುದರ ಕಡೆಗಿರುವುದಿಲ್ಲ.

ಈ ಸಂದರ್ಭದಲ್ಲಿ ಆತ್ಯಂತಿಕ ಸತ್ಯವನ್ನು ಕುರಿತು ನಾವು ಚರ್ಚಿಸುತ್ತಿರುವಾಗ ಒಂದು ಪ್ರಶ್ನೆ ಎದುರಾಗುತ್ತದೆ. ಈ ಸತ್ಯ ಕೇವಲ ಮನುಷ್ಯಮಾತ್ರದವನ ಊಹೆಯೆ ಅಥವಾ ಇಂತಹ ಒಂದು ಸತ್ಯ ಇರಬಹುದೆ? ಈ ಪ್ರಮುಖ ಪ್ರಶ್ನೆಯನ್ನು ಸ್ವಾಮೀಜಿಯವರು ಸಹ ಎತ್ತಿಕೊಳ್ಳುತ್ತಾರೆ. ಯಾವ ಅಮೂರ್ತ ಸತ್ಯದ ಬಗ್ಗೆ ನಾವು ಮಾತನಾಡುತ್ತಿದ್ದೇವೆಯೋ ಅದು ವಾಸ್ತವವಾಗಿ ಇರುವುದೇ? ಇದೆ ಎಂದು ಹೇಳಲು ಕಾರಣ ವೇನು? ಇದನ್ನು ಸ್ವಾಮೀಜಿ ಹೀಗೆ ವಿಶ್ಲೇಷಿಸುತ್ತಾರೆ. ಒಂದು ಭಾವನೆ ನಿಷ್ಕಾರಣವಾಗಿ ಹುಟ್ಟುವುದಿಲ್ಲ, ಅದಕ್ಕೆ ಸಂಬಂಧಪಟ್ಟ ವಸ್ತು ಒಂದು ಇರಲೇಬೇಕು. ಯಾವ ಭಾವನೆಗಳನ್ನು ನಾವು ಮೂಡಿಸಿಕೊಳ್ಳುತ್ತೇವೆಯೋ, ಯಾವ ಆವಶ್ಯಕತೆಯನ್ನು ನಾವು ಮನಗಾಣುತ್ತೇವೆಯೋ, ಆ ಎಲ್ಲಕ್ಕೂ ಪ್ರತಿಯಾಗಿ ವಸ್ತುವೊಂದು ಇದ್ದೇ ಇರುತ್ತವೆ. ಈ ಆನುಷಂಗಿಕ ಸಂಬಂಧಗಳನ್ನು ಸ್ವಾಮೀಜಿ ಹೀಗೆ ವಿವರಿಸುತ್ತಾರೆ: ಮನುಷ್ಯ ಉಸಿರಾಡಬೇಕೆಂದು ಬಯಸುತ್ತಾನೆ – ಹೊರಗೆ ಗಾಳಿ ಇದೆ, ಮನುಷ್ಯ ಆಹಾರ ಸೇವಿಸಬೇಕೆಂದು ಬಯಸುತ್ತಾನೆ – ಹೊರಗೆ ಆಹಾರ ಇದೆ. ಈ ಆಸೆಗಳನ್ನು ನಮ್ಮ ಮನಸ್ಸಿನಲ್ಲಿ ಹುಟ್ಟಿಸಿದ್ದು ಯಾವುದು? ಹೊರಗಿನ ವಸ್ತುಗಳು. ಹಾಗೆಯೇ ಬೆಳಕಿನ ಪ್ರಚೋದನೆಯಿಂದ ಕಣ್ಣು ಹುಟ್ಟಿಕೊಂಡಿತು, ಶಬ್ದದ ಪ್ರಚೋದನೆಯಿಂದ ಕಿವಿ ಹುಟ್ಟಿಕೊಂಡಿತು, ಮನುಷ್ಯನ ಒಳಗಿನಿಂದ ಧ್ವನಿಸುವ ಪ್ರತಿಯೊಂದು ಆಸೆಯೂ ಅದಕ್ಕೆ ತತ್ಸಮಾನವಾಗಿ ಹೊರಗೆ ಇರುವ ಒಂದು ವಸ್ತುವಿನಿಂದ ಹುಟ್ಟುತ್ತದೆ. ಹಾಗೆಯೇ ಪರಿಪೂರ್ಣತೆಯ ಆಸೆ ನಮ್ಮ ಮನಸ್ಸಿನಲ್ಲಿ ಹುಟ್ಟಿರುವುದಕ್ಕೆ ಕಾರಣ ಆ ಒಂದು ಸ್ಥಿತಿ ಇದೆ ಎಂಬುದಕ್ಕಾಗಿ. ಗುರಿಯನ್ನು ಮುಟ್ಟುವ ಈ ಆಸೆಯು ವಸ್ತುಪ್ರಪಂಚದ ಪ್ರಲೋಭನೆಗಳ ನಡುವೆಯೂ ಶಕ್ತಿಶಾಲಿಯಾಗಿ ಅನೇಕ ಸಹಸ್ರಮಾನಗಳ ಪರ್ಯಂತ ಜೀವಂತವಾಗಿ ಮನುಕುಲದ ಮನದಾಳದಲ್ಲಿ